ಎಚ್.ಎಸ್. ರಾಘವೇಂದ್ರ ರಾವ್



# ಹನುಮಪ್ಪನೇ ಹಗ್ಗ ತಿನ್ನುವಾಗ ಪೂಜಾರಿ ಶಾವಿಗೆ ಕೇಳಿದಂತೆ

ಸಾಹಿತ್ಯಪ್ರೀತಿ, ಸಾಹಿತ್ಯವಿಮರ್ಶೆ, ಆತ್ಮವಿಮರ್ಶೆ ಮತ್ತು ಅಷ್ಟೇ ಮುಖ್ಯವಾಗಿ ಜೀವನ ವಿಮರ್ಶೆ ಮುಂತಾದ ಹತ್ತು ಹಲವು ಸಂಗತಿಗಳು ಅಂತರಂಗದಲ್ಲಿ ಬೇರುಬಿಡುವುದು ಶಾಲೆ/ಕಾಲೇಜು, ಕುಟುಂಬ ಮತ್ತು ಸಮುದಾಯಗಳಲ್ಲಿ. ನಮ್ಮ ಕಾಲದಲ್ಲಿ ಆಗಿರುವ ಹಾಗೆ, ಇವು ಅಸಮರ್ಥವೂ ಅನಾಸಕ್ತವೂ ಭ್ರಷ್ಟವೂ ಆದಾಗ ಎಲ್ಲವೂ ನಾಶವಾಗುತ್ತದೆ. ಇಂದಿನ ವಾತಾವರಣದಲ್ಲಿ ಸ್ವ–ಸಮರ್ಥನೆಯೇ ಮುಖ್ಯವಾಗಿ 'ಅನ್ಯ'ವನ್ನು ಸಹಿಸುವುದು ಅಪರೂಪವಾಗಿದೆ. ಆದ್ದರಿಂದ ದಿಟವಾದ ವಿಮರ್ಶೆ ಯಾರಿಗಾದರೂ ಹಿಡಿಸುವುದು ಕಷ್ಟ. ಪ್ರತಿಯೊಬ್ಬ ಲೇಖಕನೂ ಸ್ವತಃ ತನ್ನ ಬರಹದ ವಿಮರ್ಶಕನಾಗಬೇಕು. ಇದು ಸಾಧ್ಯವಾಗಲು ಸಾಹಿತ್ಯವಿಮರ್ಶೆಯ ತತ್ತ್ವಗಳಿಗಿಂತ ಹೆಚ್ಚಾಗಿ, 'ಸಾಹಿತ್ಯದ' ಓದು ಅಗತ್ಯ. ಲೇಖಕರು ಓದುವ ಬಗೆಯು, ಹಾಗಲ್ಲದ ಓದುಗರಿಗಿಂತ ಭಿನ್ನವಾಗಿರಬೇಕು. ತಾನು ಬರೆಯುತ್ತಿರುವ ಭಾಷೆಯ ಮತ್ತು ತಾನು ಆರಿಸಿಕೊಂಡಿರುವ ಪ್ರಕಾರದ ಸಾಧ್ಯತೆಗಳನ್ನು ಇತರ ಲೇಖಕರು ವಿಸ್ತರಿಸಿರುವ ಬಗೆಗಳನ್ನು ಅಭ್ಯಾಸ ಮಾಡುತ್ತಲೇ ಅವುಗಳನ್ನು ಮೀರುವ, ಮುರಿಯುವ ಬಗೆಗಳನ್ನು ಅವನು ಕಂಡುಕೊಳ್ಳಬೇಕು. ಈ ದೃಷ್ಟಿಯಿಂದ ಬೇರೆ ಕೃತಿಗಳ/ಲೇಖಕರ ಬಗ್ಗೆ ಬರೆದಿರುವ ವಿಮರ್ಶೆಯೂ ತನಗೆ ಉಪಯುಕ್ತವೆಂದೇ ಅವನು ತಿಳಿಯಬೇಕು.

ಪ್ರತಿಯೊಂದು ಪೀಳಿಗೆಯೂ ತನ್ನ ಸಾಹಿತ್ಯತತ್ತ್ವಗಳನ್ನು, ಬರವಣಿಗೆಯ ಬಗೆಗಳನ್ನು ತಾನೇ ಕಂಡುಕೊಳ್ಳಬೇಕು. ಅಂತೆಯೇ ತನ್ನದೇ ಆದ ವಿಮರ್ಶಕರ ವಲಯವನ್ನು ಕಟ್ಟಿಕೊಳ್ಳಬೇಕು. ಹಿಂದಿನ ಪೀಳಿಗೆಗಳವರ ಬರಹಗಳ ಸ್ವೀಕಾರ, ನಿರಾಕರಣೆ ಮತ್ತು ಮರುಕಟ್ಟುವಿಕೆಗಳನ್ನು ಮಾಡಬೇಕು. 'ಹಿರಿಯರ' ಮೆಚ್ಚಿಗೆ, ಮಾರ್ಗದರ್ಶನಗಳಿಗಾಗಿ ಕಾಯದೆ ತಮ್ಮ ಸಮಸ್ಯೆಗಳನ್ನು ತಾವೇ ಬಿಡಿಸಿಕೊಳ್ಳಬೇಕು. ಯಾವುದೇ ಪೀಳಿಗೆಯು ತನಗಿಂತ ಕಿರಿಯರ ಬಗ್ಗೆ ಬರೆದಿರುವುದು ಬಹಳ ಕಡಿಮೆ. ಅಷ್ಟೇಕೆ, ತನ್ನ ಸಮಕಾಲೀನರ ಬಗ್ಗೆ ಬರೆಯುವುದೂ ಅಷ್ಟಕ್ಕಷ್ಟೇ. ನಮ್ಮ ಕಾಲದ ಜೀವನ/ಕಲೆಗಳ ಬಿಕ್ಕಟ್ಟುಗಳ ಬಗ್ಗೆ ನಾವೇ ಯೋಚಿಸಬೇಕು. ಸಾಹಿತ್ಯದ ವಿದ್ಯಾರ್ಥಿ, ಅಧ್ಯಾಪಕ ಅಲ್ಲದವರೂ ಪರಿಭಾಷೆಯ ಹಂಗಿಗೆ ಒಳಗಾಗದೆ, ವಿಮರ್ಶೆಯ ಓದು ಬರಹಗಳಲ್ಲಿ ತೊಡಗಿಕೊಳ್ಳಬೇಕು. ಕೀರ್ತಿನಾಥ ಕುರ್ತಕೋಟಿಯವರನ್ನು ಓದಲು ಕನ್ನಡ ಎಂ.ಎ. ಯಾಕೆ ಬೇಕು?

ಕೃತಿವಿಮರ್ಶೆ ಮತ್ತು ಪ್ರಾಯೋಗಿಕ ವಿಮರ್ಶೆಗಳು ಕಡಿಮೆಯಾಗಿ, 'ಸಂಸ್ಕೃತಿವಿಮರ್ಶೆ'ಯ ಪ್ರಮಾಣವು ಜಾಸ್ತಿಯಾಗಿರುವುದು ಕಳೆದ ಕೆಲವು ದಶಕಗಳ ವಿದ್ಯಮಾನ. ಸಾಹಿತಿಗಳ/ಸಾಹಿತ್ಯದ